**ದಿನಾಂಕ 27.06.2024 ರಂದು ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಎಸ್.ಕೆ. ವಕೀಲರಿಂದಃ-**

11. 1 ನೇ ಪ್ರತಿವಾದಿ ಮತ್ತು ವಾದಿ ಸಂಗಡ ಆದಂತ ಎಲ್ಲಾ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇದೆ. ನಿಪಿ11 ರಲ್ಲಿ ಪರ್ಚೇಸ್ ಆರ್ಡರ್ ಬಗ್ಗೆ ನಮೂದು ಇದೆ. ಈಗ ಮತ್ತೇ ಹೇಳುತ್ತೇನೆ, ನಿಪಿ11 ರಲ್ಲಿ ಪರ್ಚೇಸ್ ಆರ್ಡರ್ ಬಗ್ಗೆ ನಮೂದು ಇರುವುದಿಲ್ಲ. ನಿಪಿ13 ರಲ್ಲಿ ಕೂಡ ಪರ್ಚೇಸ್ ಆರ್ಡರ್ ಬಗ್ಗೆ ನಮೂದು ಇರುವುದಿಲ್ಲ. ಯಾವುದೇ ಪರ್ಚೇಸ್ ಆರ್ಡರ್

ಗಳು ಇಲ್ಲದೇ ಇರುವುದರಿಂದ ನಿಪಿ11 ಮತ್ತು 13 ರಲ್ಲಿ ಅವುಗಳ ಬಗ್ಗೆ ನಮೂದು ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಪರ್ಚೇಸ್ ಆರ್ಡರ್ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಪಿ11 ಮತ್ತು 13 ಕ್ಕೆ ಸಂಬಂಧಪಟ್ಟಂತೆ ಅಂದರೆ ರೂ.2,26,560/- ರೂ.1,16,969/- ಇವುಗಳಿಗೆ ಸಂಬಂಧಪಟ್ಟಂತೆ ಪರ್ಚೇಸ್ ಆರ್ಡರ್ ಗಳು ನಿಪಿ17 ರ ಪುಟ ಸಂಖ್ಯೆ 2 ರಲ್ಲಿ ಮತ್ತು ನಿಪಿ16 ರ ಪುಟ ಸಂಖ್ಯೆ 4 ರಲ್ಲಿ ಇರುತ್ತವೆ.

12. ನಿಪಿ16 ರ ಪುಟ ಸಂಖ್ಯೆ 4 ರಲ್ಲಿ ರೂ.23.00 ಲಕ್ಷ ನಮೂದು ಇರುತ್ತದೆ ಅಂದರೆ ಸಾಕ್ಷಿದಾರರು 1 ರಿಂದ 5 ರವರೆಗೆ ಇನ್ವಾಯಿಸ್‌ಗಳನ್ನು ಕಳುಹಿಸಬಹುದು. ಅದರಲ್ಲಿ ರೂ.1,16,969/- ಕೂಡ ಸೇರಿಕೊಂಡಿರುತ್ತದೆ ಅಂತ ಉತ್ತರಿಸುತ್ತಾರೆ. ನಿಪಿ17 ರ ಪುಟ ಸಂಖ್ಯೆ 2 ರಲ್ಲಿ ರೂ.2.40 ಲಕ್ಷ ನಮೂದು ಇರುತ್ತದೆ ಅಂದರೆ ಸರಿ. ಆದರೆ ಎಷ್ಟು ಕೇಬಲ್ ಕಳುಹಿಸಿರುತ್ತೇವೆ ಅಷ್ಟಕ್ಕೆ ಮಾತ್ರ ಬಿಲ್ ಮಾಡಲಾಗುತ್ತದೆ.

(**ಈ ಸಮಯದಲ್ಲಿ ಮುಂದಿನ ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ, ನೀಡಲಾಯಿತು**)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷ್ಯವನ್ನು ಬೆರಳಚ್ಚು ಮಾಡಲಾಯಿತು)

(ಓ.ಹೇ.ಕೇ.ಸ)

**84** ನೇ ಅ.ನ.ಸಿ ಮತ್ತು ಸತ್ರ ನ್ಯಾಯಾಧೀಶರು,
ಸಿ.ಸಿ.ಎಚ್-**85**, ಬೆಂಗಳೂರು.